ಸಮಂಜಸವಾದ ಉತ್ತರ ನನಗೆ ಸಮಾಧಾನಕರವಾಗುವ ರೀತಿಯಲ್ಲಿ ಸಿಕ್ಕಿಲ್ಲ. ರೈತರು ಪರಿಹಾರಕ್ಕೆ ಸರ್ಕಾರದ ಕಥೆ ನೋಡುತ್ತಿದ್ದಾರೆ. ಅದನ್ನು ನಾನು ಪ್ರಸ್ತಾಪ ಮಾಡಬೇಕೆಂದು ಬಯಸಿದ್ದೇನೆಯೇ ಹೊರತು ಅದರಲ್ಲೇನೂ ಪ್ರತಿಷ್ಠೆ ಏನೂ ಇಲ್ಲ. ಇವೊತ್ತು ಆಗದಿದ್ದರೆ ನಾಳೆಯೇ ಅವಕಾಶ ಮಾಡಿಕೊಡಿ. ಒಟ್ಟಿನಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಿಯಷ್ಟೆ. ಒಟ್ಟಿನಲ್ಲಿ ಅವಕಾಶ ಮಾಡಿಕೊಟ್ಟರೆ ಸಾಕು. ಏಕೆಂದರೆ ಅಧ್ಯಕ್ಷರೇ, ಅದನ್ನು ಒಪ್ಪಿ ಅಜೆಂಡಾದಲ್ಲಿ ಬಂದಿದೆ. ನಾನು ಪ್ರತಿ ದಿನವೂ ಕೂಡ ಸಾಧಾರಣವಾಗಿ ಇರುತ್ತೇನೆ. ಪ್ರತಿ ದಿನವೂ ಇದು ಚರ್ಚೆಗೆ ಬರುತ್ತದೆ, ಬರುತ್ತದೆ ಎಂದು ಹೇಳಿ ಜಾತಕ ಪಕ್ಷಿಯ ಹಾಗೆ ನಾನು ಕಾಯ್ದುಕೊಂಡು ಇಲ್ಲಿ ಕುಳಿತಿದ್ದೇನೆ, ಶಬರಿಯ ಹಾಗೆ.

ಉಪಾಧ್ಯಕ್ಷರು : ಆಯಿತು. ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಾಯಂಕಾಲ 6 ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 18ನೇ ಜುಲೈ 2003ರ ಶುಕ್ರವಾರ ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

6. ಅನುಬಂಧ 1

ರಾಜ್ಯದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿ

3052 (3590) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಕ್ಕರೆ ಅಭಿವೃದ್ಧಿ ನಿಧಿ ಸ್ಥಾಪಿಸಲಾಗಿದೆಯೇ? ಸ್ಥಾಪಿಸಲಾಗಿದ್ದಲ್ಲಿ, ರಾಜ್ಯ ಸರ್ಕಾರದ ಪಾಲು ಎಷ್ಟು? ಸಕ್ಕರೆ ಕಾರ್ಖಾನೆಗಳ ಪಾಲು ಎಷ್ಟು?

ಆ) ಈ ನಿಧಿಯಿಂದ ನೆರವು ಪಡೆದ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ಹಣ ಎಷ್ಟು (ಕಾರ್ಖಾನೆವಾರು ವಿವರ ಒದಗಿಸುವುದು)

ಶ್ರೀ ಎಂ. ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿ ಇನ್ನೂ ಸ್ಥಾಪನೆಯಾಗಿರುವುದಿಲ್ಲ. ಇಂತಹ ಒಂದು ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದ್ದು, ಸರ್ಕಾರದ ವತಿಯಿಂದ ಮೂಲಧನ ರೂಪದಲ್ಲಿ ರೂ. 25.00 ಕೋಟಿ ಪಡೆದು, ಅದರಂತೆ ಮುಂದೆ ಈ ನಿಧಿಗೆ ಕಬ್ಬು ಬೆಳೆಗಾರರಿಂದ, ಕಾರ್ಖಾನೆಯ ವತಿಯಿಂದ ಹಾಗೂ ಸರ್ಕಾರದ ವತಿಯಿಂದ ಪ್ರತಿ ಟನ್ ಕಬ್ಬು ನುರಿಸುವಿಕೆಗೆ ತಲಾ ರೂ. 5.00 ರಂತೆ ಸಂಗ್ರಹಿಸಲು ಯೋಜಿಸಲಾಗಿದೆ.

ಆ) ಕರ್ನಾಟಕ ಸಕ್ಕರೆ ಅಭಿವೃದ್ಧಿ ನಿಧಿ ಇನ್ನೂ ಸ್ಥಾಪನೆಯಾಗಿರುವುದಿಲ್ಲ. ಸ್ಥಾಪನೆಗಾಗಿ ಸೂಕ್ತ ಕಾನೂನನ್ನು ರಚಿಸಲಾಗುತ್ತಿದೆ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಪಶು ಆಸ್ಪತ್ರೆಗಳಲ್ಲಿ ವೈದ್ಯರ ನೇಮಕ

3054 (3592) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2001ರಿಂದ ಮೇಲ್ದರ್ಜೆಗೇರಿಸಿದ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು: (ವರ್ಷವಾರು ಜಿಲ್ಲಾವಾರು ವಿವರ ಒದಗಿಸುವುದು)